ಮುರುಡೇಶ್ವರದಲ್ಲಿ ಬಸ್ ನಿಲುಗಡೆ

117 (1797); ಶ್ರೀ ಮಂಕಾಳ ಸುಬ್ಬ ವೈದ್ಯ (ಭಟ್ಕಳ)

ಅ) ಭಟ್ಕಳ ತಾಲೂಕಿನ ಮುರಡೇಶ್ವರವು ರಾಜ್ಯದಲ್ಲಿಯೇ ಪ್ರಸಿದ್ಧ ಪ್ರವಾಸಿ ಸ್ಥಳವಾಗಿದ್ದು ಈ ಪ್ರವಾಸ ಕೇಂದ್ರದಲ್ಲಿ ಬಸ್ ನಿಲ್ದಾಣದ ಸೌಲಭ್ಯವಿದ್ದರೂ ಕೂಡ ಭಟ್ಕಳ–ಹೊನ್ನಾವರ ಮಾರ್ಗವಾಗಿ ಸಂಚರಿಸುವ ಬಸ್ಸುಗಳು ಮುರಡೇಶ್ವರ ಬಸ್ ನಿಲ್ದಾಣಕ್ಕೆ ಹೋಗದೇ ಇರಲು ಕಾರಣವೇನು ?

ಆ) ಮುರಡೇಶ್ವರದಲ್ಲಿ ಬಸ್ ನಿಲುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) **ಮತ್ತು ಆ)**

ಅ) ಮುರಡೇಶ್ವರವು ಭಟ್ಕಳ–ಹೊನ್ನಾವರ ಮಧ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ–66(17) ರ ಮುಖ್ಯ ರಸ್ತೆಯಿಂದ 1.5 ಕಿಮೀ ಒಳಭಾಗದಲ್ಲಿದೆ. ಪ್ರಸ್ತುತ ಮುರಡೇಶ್ವರ ಬಸ್ ನಿಲ್ದಾಣದ ಮೂಲಕ 3 ರಾಜಹಂಸ, 1 ಸ್ಲೀಪರ್, 1 ಮಲ್ಟಿ ಎಕ್ಸಲ್, 10 ವೇಗದೂತ, ಮತ್ತು 20 ಸಾಮಾನ್ಯ ಸಾರಿಗೆಗಳು ಒಟ್ಟು 35 ಸಾರಿಗೆಗಳು ಕಾರ್ಯಾಚರಣೆಯಲ್ಲಿರುತ್ತವೆ. ವಿವರಗಳನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ.

ಬ) ಮೇಲಿನ 35 ಸಾರಿಗೆಗಳನ್ನು ಹೊರತುಪಡಿಸಿ ರಾಷ್ಟ್ರೀಯ ಹೆದ್ದಾರಿ–(66)17 ರಲ್ಲಿ ಮುರುಡೇಶ್ವರ ಕ್ರಾಸ್ ಮೂಲಕ ಸಂಚರಿಸುವ ದೂರ ಮಾರ್ಗದ 97 ಸಾರಿಗೆಗಳು ಮುರಡೇಶ್ವರ ಗೇಟ ಬಳಿ ನಿಲುಗಡೆಯಾಗುತ್ತಿದೆ. ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಲಾಗಿದೆ.

ಕ) ರಾಷ್ಟ್ರೀಯ ಹೆದ್ದಾರಿ ಮೂಲಕ ಸಂಚರಿಸುವ ಎಲ್ಲಾ ಸಾರಿಗೆಗಳು ಮುರುಡೇಶ್ವರ ಬಸ್ ನಿಲ್ದಾಣದ ಮೂಲಕ ಸಂಚರಿಸುವುದು ಕೆಳಕಾಣಿಸಿರುವ ಕಾರಣಗಳಿಂದ ಸೂಕ್ತವಾಗಿರುವುದಿಲ್ಲ.

1) ಮುರಡೇಶ್ವರ ಗೇಟ್ (ಮುರಡೇಶ್ವರ ಕ್ರಾಸ್) ದಿಂದ ಊರ ಒಳಗೆ ಇರುವ ಬಸ್ ನಿಲ್ದಾಣಕ್ಕೆ ಹೋಗುವ ರಸ್ತೆಯು ಕಿರಿದಾಗಿದ್ದು ಮುರಡೇಶ್ವರ ದರ್ಶನಕ್ಕೆ ಬರುವ ಪ್ರವಾಸಿಗರ ಖಾಸಗಿ ವಾಹನಗಳಾದ ಟೆಂಪೋ ಟ್ರ್ಯಾಕ್ಸ್, ಕಾರು, ಹಾಗೂ ಬಸ್ಸುಗಳು ಈ ರಸ್ತೆಯ ಎರಡೂ ಪಕ್ಕದಲ್ಲಿ ನಿಲ್ಲುವುದರಿಂದ ಸರಾಗವಾಗಿ ಬಸ್ಸುಗಳು ಹೋಗಿ ಬರಲು ಅಡೆ–ತಡೆಯುಂಟಾಗುತ್ತದೆಯಲ್ಲದೇ ಸಣ್ಣ–ಪುಟ್ಟ ಅಪಘಾತಗಳು ಹಾಗೂ ಟ್ರಾಫಿಕ್ ಜಾಮ್ ಉಂಟಾಗುವ ಸಾಧ್ಯತೆಯಿರುತ್ತದೆ.

2) ಮುರಡೇಶ್ವರ ಗೇಟನಿಂದ ಮುರಡೇಶ್ವರ ಬಸ್ ನಿಲ್ದಾಣಕ್ಕೆ 1.5 ಕಿಮೀಗಳ ದೂರದ ಅಂತರವಿದ್ದು ಬಸ್ ನಿಲ್ದಾಣಕ್ಕೆ ಹೋಗಿ ಬರುವುದರಿಂದ 03 ಕಿಮೀ ಮತ್ತು 15 ನಿಮಿಷ ಪ್ರಯಾಣ ವೇಳೆಯಲ್ಲಿ ಹೆಚ್ಚಳವಾಗುತ್ತದೆ. ಇದರಿಂದಾಗಿ ದೂರ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರು ಪ್ರತಿಭಟಿಸುವ ಸಾಧ್ಯತೆ ಇರುತ್ತದೆ?

3) ಮುರಡೇಶ್ವರ ಬಸ್ ನಿಲ್ದಾಣದ ಆವರಣದ ವಿಸ್ತೀರ್ಣವು ಚಿಕ್ಕದಿರುವುದರಿಂದ ಒಮ್ಮೆ ಕೇವಲ 4–5 ಬಸ್ಸುಗಳನ್ನು ಮಾತ್ರ ನಿಲ್ಲಿಸಬಹುದಾಗಿರುತ್ತದೆ.

4) ಮುರಡೇಶ್ವರ ಬಸ್ ನಿಲ್ದಾಣದ ಮುಂದೆ ಪ್ರವಾಸಿ ವಾಹನಗಳಿಂದಾಗಿ ಟ್ರಾಫಿಕ್–ಜಾಮ ಇರುವುದರಿಂದ ಬಸ್ ನಿಲ್ದಾಣದಿಂದ ಬಸ್ಸುಗಳನ್ನು ಒಳ–ಹೊರಗೆ ತೆಗೆದುಕೊಳ್ಳುವಾಗ ತೊಂದರೆ ಉಂಟಾಗುತ್ತದೆ.

5) ಮುರಡೇಶ್ವರ ಬಸ್ ನಿಲ್ದಾಣದಲ್ಲಿ ದೂರ ಮಾರ್ಗಕ್ಕೆ ಸಂಚರಿಸುವ ಪ್ರಯಾಣಿಕರ ಸಂಖ್ಯೆ ವಿರಳವಿರುತ್ತದೆ.

6) ಈ ಮೇಲ್ಕಂಡ ಕಾರಣಗಳಿಂದ ಮತ್ತು ಪ್ರಸ್ತುತ 35 ಸಾರಿಗೆ ಸರತಿಗಳ ಕಾರ್ಯಾಚರಣೆ ಮುರಡೇಶ್ವರ ಬಸ್ ನಿಲ್ದಾಣದ ಮೂಲಕ ಇರುವುದರಿಂದ ಇನ್ನು ಹೆಚ್ಚಿನ ಸಾರಿಗೆ ಸರತಿಗಳನ್ನು ಮುರಡೇಶ್ವರ ಬಸ್‌ನಿಲ್ದಾಣದ ಮೂಲಕ ಕಾರ್ಯಾಚರಿಸುವುದು ದೂರ ಮಾರ್ಗದ ಪ್ರಯಾಣಿಕರ ಹಿತದೃಷ್ಟಿಯಿಂದ ಸಮಂಜಸವೇನಿಸುವುದಿಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1797 ಕ್ಕೆ ಅನುಬಂದ-1

ಮುರುಡೇಶ್ವರ ಬಸ್ ನಿಲ್ದಾಣದಿಂದ ಸಂಚರಿಸುವ ಅನುಸೂಚಿಗಳ ವಿವರ

ಕ್ರ. ಸಂ.	ಅನುಸೂಚಿ ಸಂಖ್ಯೆ	ಮಾರ್ಗ	ಸಾಮಾನ್ಯ/ ವೇಗದೂತ	ಘಟಕ	ವಿಭಾಗ	ಬಿಡುವ ಸಮಯ
1	9	ಭಟ್ಕಳ-ಬೆಂಗಳೂರು	ವೇ.ದೂತ	ಭಟ್ಕಳ	ಉ.ಕ.	6.00
2	46	ಮುರಡೇಶ್ವರ-ಅಥಣಿ	ವೇ.ದೂತ	ಅಥಣಿ	ಚಿಕ್ಕೋಡಿ	6.00
3	15	ಭಟ್ಕಳ-ಶಿರಸಿ	ವೇ.ದೂತ	ಭಟ್ಕಳ	ಉ.ಕ.	6.45
4	51	ಕೊಪ್ಪದಮಕ್ಕಿ-ಮುರಡೇಶ್ವರ-ಭಟ್ಕಳ	ಸಾಮಾನ್ಯ	ಭಟ್ಕಳ	ಉ.ಕ.	7.10
5	33	ಭಟ್ಕಳ-ಬಳ್ಳಾರಿ	ವೇ.ದೂತ	ಭಟ್ಕಳ	ಉ.ಕ.	8.10
6	164	ಗೋಕರ್ಣ-ಮೈಸೂರು	ವೇ.ದೂತ	ಮೈಸೂರು	ಮೈಸೂರು(ಗ್ರಾ)	8.40
7	54	ಭಟ್ಕಳ-ಕೊಪ್ಪದಮಕ್ಕಿ	ಸಾಮಾನ್ಯ	ಭಟ್ಕಳ	ಉ.ಕ.	9.00
8	16	ಭಟ್ಕಳ-ಶಿರಸಿ	ವೇ.ದೂತ	ಭಟ್ಕಳ	ಉ.ಕ.	10.00
9	61	ಭಟ್ಕಳ-ಉತ್ತರಕೊಪ್ಪ	ಸಾಮಾನ್ಯ	ಭಟ್ಕಳ	ಉ.ಕ	11.45
10	12ಆ	ಪಣಜಿ-ಭಟ್ಕಳ	ವೇಗದೂತ	ಭಟ್ಕಳ	ಉ.ಕ	11.45
11	31	ಭಟ್ಕಳ-ಹಿರೇಕೆರೂರ	ವೇ.ದೂತ	ಹಿರೇಕೆರೂರು	ಹಾವೇರಿ	13.45
12	54	ಭಟ್ಕಳ-ಮಡಿಕೇರಿ	ಸಾಮಾನ್ಯ	ಭಟ್ಕಳ	ಉ.ಕ	14.45
13	54	ಮಡಿಕೇರಿ-ಭಟ್ಕಳ	ಸಾಮಾನ್ಯ	ಭಟ್ಕಳ	ಉ.ಕ	15.30
14	1/2	ಭಟ್ಕಳ-ಮುರುಡೇಶ್ವರ-ಮೈಸೂರು	ರಾಜಹಂಸ	ಭಟ್ಕಳ	ಉ.ಕ	16.00
15	7/8	ಭಟ್ಕಳ-ಬೆಂಗಳೂರು	ರಾಜಹಂಸ	ಭಟ್ಕಳ	ಉ.ಕ	16.30
16	58	ಭಟ್ಕಳ-ಕೊಪ್ಪದಮಕ್ಕಿ	ಸಾಮಾನ್ಯ	ಭಟ್ಕಳ	ಉ.ಕ	17.15
17	58	ಕೊಪ್ಪದಮಕ್ಕಿ-ಭಟ್ಕಳ	ಸಾಮಾನ್ಯ	ಭಟ್ಕಳ	ಉ.ಕ	18.15
18	10	ಬೆಂಗಳೂರು-ಭಟ್ಕಳ	ವೇಗದೂತ	ಭಟ್ಕಳ	ಉ.ಕ	18.30
19	32	ಬೆಂಗಳೂರು-ಭಟ್ಕಳ	ವೇಗದೂತ	ಭಟ್ಕಳ	ಉ.ಕ	18.45
20	5/6	ಭಟ್ಕಳ-ಬೆಂಗಳೂರು	ರಾಜಹಂಸ	ಭಟ್ಕಳ	ಉ.ಕ	18.45
21	50	ಭಟ್ಕಳ-ಕೊಪ್ಪದಮಕ್ಕಿ	ಸಾಮಾನ್ಯ	ಭಟ್ಕಳ	ಉ.ಕ	21.30
22	102	ಮುರುಡೇಶ್ವರ-ಮೈಸೂರು	ಸ್ಲೀಪರ್	ಮೈಸೂರು	ಮೈಸೂರು (ಗ್ರಾ)	20.05
23	18	ಮುರುಡೇಶ್ವರ-ಬೆಂಗಳೂರು	ಮಲ್ಟಿ ಎಕ್ಸಲ್	ಮಂಗಳೂರು	ಮಂಗಳೂರು	20.00

ಮುರುಡೇಶ್ವರ ಬಸ್ ನಿಲ್ದಾಣದಿಂದ ನಿರ್ಗಮಿಸುವ ಸಾಮಾನ್ಯ ಅನುಸೂಚಿಗಳ ವೇಳಾಪಟ್ಟಿ

ಕ್ರ ಸಂ.	ಅನುಸೂಚಿ	ಮಾರ್ಗ	ಘಟಕ	ಬಿಡುವ ಸಮಯ
1	62	ಮುರುಡೇಶ್ವರ-ವಂದಲ್ಸೆ	ಭಟ್ಕಳ	08.00
2	62	ವಂದಲ್ಸೆ-ಮುರುಡೇಶ್ವರ	ಭಟ್ಕಳ	09.00
3	62	ಮುರುಡೇಶ್ವರ-ವಂದಲ್ಸೆ	ಭಟ್ಕಳ	10.00
4	62	ವಂದಲ್ಸೆ-ಭಟ್ಕಳ	ಭಟ್ಕಳ	11.00
5	61	ಮುರುಡೇಶ್ವರ-ವಂದಲ್ಸೆ	ಭಟ್ಕಳ	11.45
6	61	ವಂದಲ್ಸೆ-ಮುರುಡೇಶ್ವರ	ಭಟ್ಕಳ	12.45
7	61	ಮುರುಡೇಶ್ವರ-ವಂದಲ್ಸೆ	ಭಟ್ಕಳ	14.45
8	61	ವಂದಲ್ಸೆ-ಮುರುಡೇಶ್ವರ	ಭಟ್ಕಳ	15.45
9	61	ಮುರುಡೇಶ್ವರ-ವಂದಲ್ಸೆ	ಭಟ್ಕಳ	16.45
10	61	ವಂದಲ್ಸೆ-ಮುರುಡೇಶ್ವರ	ಭಟ್ಕಳ	17.45
11	61	ಮುರುಡೇಶ್ವರ-ವಂದಲ್ಸೆ	ಭಟ್ಕಳ	19.30
12	62	ವಂದಲ್ಸೆ-ಮುರುಡೇಶ್ವರ	ಭಟ್ಕಳ	06.45

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1797 ಕ್ಕೆ ಅನುಬಂದ-2

ಮುರಡೇಶ್ವರ ಕ್ಷೇತ್ರ ಮಾರ್ಗವಾಗಿ ಸಂಚರಿಸುವ ಸಾರಿಗೆಗಳು

ಹುಬ್ಬಳ್ಳಿ ಕಡೆಗೆ (ಶಿರಸಿ/ಅಂಕೋಲಾ ಮಾರ್ಗ)

ಕ್ರಸಂ	ಅನು. ಸಂಖ್ಯೆ	ಮಾರ್ಗ	ವಾಹನದ ಮಾದರಿ	ಘಟಕ	ವಿಭಾಗ	ವೇಳೆ
1	37/38	ಭಟ್ಕಳ-ತೆರದಾಳ	ವೇಗದೂತ	ಭಟ್ಕಳ	ಐ.ಕ.	6.00
2	22/23	ಭಟ್ಕಳ-ಕೊಲ್ಲಾಪುರ	"	ಭಟ್ಕಳ	ಐ.ಕ.	7.00
3	3/4	ಉಡುಪಿ-ಹುಬ್ಬಳ್ಳಿ	"	ಕಾರವಾರ	ಐ.ಕ.	7.15
4	33/34	ಭಟ್ಕಳ-ಬಜ್ಜಾಲಿ	"	ಭಟ್ಕಳ	ಐ.ಕ.	8.00
5	18/19	ಭಟ್ಕಳ-ಕೊಲ್ಲಾಪುರ	"	ಭಟ್ಕಳ	ಐ.ಕ.	8.15
6	39/40	ಭಟ್ಕಳ-ಗೋಕಾಕ	"	ಭಟ್ಕಳ	ಐ.ಕ.	8.30
7	11/12	ಉಡುಪಿ-ಬಾಗಲಕೋಟ	"	ಉಡುಪಿ	ಮಂಗಳೂರು	8.45
8	90/91	ಮಂಗಳೂರು-ಬಾಗಲಕೋಟ	"	ಬಾಗಲಕೋಟ	ಮಂಗಳೂರು	9.00
9	61/62	ಮಂಗಳೂರು-ಹುಬ್ಬಳ್ಳಿ	"	ಸವಣೂರು	ಹಾವೇರಿ	9.15
10	71/72	ಭಟ್ಕಳ-ಬಾಗಲಕೋಟ	"	ಭಟ್ಕಳ	ಐ.ಕ.	9.20
11	105/106	ಕುಂದಾಪುರ-ಗೋಕಾಕ	"	ಕುಂದಾಪುರ	ಮಂಗಳೂರು	9.30
12	13/14	ಉಡುಪಿ-ಬೆಳಗಾಂ	"	ಉಡುಪಿ	ಮಂಗಳೂರು	9.30
13	15/16	ಭಟ್ಕಳ-ಶಿರಸಿ	"	ಭಟ್ಕಳ	ಐ.ಕ.	9.45
14	11/12	ಮಂಗಳೂರು-ಲಕ್ಷ್ಮೇಶ್ವರ	"	ಲಕ್ಷ್ಮೇಶ್ವರ	ಗದಗ	10.00
15	16/17	ಮಂಗಳೂರು-ಹುಬ್ಬಳ್ಳಿ	"	ಉಡುಪಿ	ಮಂಗಳೂರು	10.30

16	29/30	ಮಂಗಳೂರು-ಹಾಸಗಲ್	"	ಹಾಸಗಲ್	ಹಾವೇರಿ	10.30
17	18/19	ಧರ್ಮಸ್ಥಳ-ದಾಂಡೇಲಿ	"	ದಾಂಡೇಲಿ	ಧಾರವಾಡ	10.35
18	13/14	ಭಟ್ಕಳ-ಹೈದ್ರಾಬಾದ	"	ಭಟ್ಕಳ	ಐ.ಕ.	11.00
19	107/108	ಮಂಗಳೂರು-ನವಲಗುಂದ	"	ನವಲಗುಂದ	ಧಾರವಾಡ	11.15
20	33/34	ಧರ್ಮಸ್ಥಳ-ಹಾವೇರಿ	"	ಹಾವೇರಿ	ಹಾವೇರಿ	11.35
21	59/60	ಭಟ್ಕಳ-ಇಳಕಲ್	"	ಭಟ್ಕಳ	ಐ.ಕ.	12.00
22	29/30	ಧರ್ಮಸ್ಥಳ-ಹಳಿಯಾಳ	"	ಹಳಿಯಾಳ	ಧಾರವಾಡ	12.15
23	3/4,	ಭಟ್ಕಳ-ಹಂಪಿ	"	ಭಟ್ಕಳ	ಐ.ಕ.	12.30
24	43/44	ಧರ್ಮಸ್ಥಳ-ಹುಬ್ಬಳ್ಳಿ	"	ಯಲ್ಲಾಪುರ	ಐ.ಕ.	12.45
25	107/108	ಮಂಗಳೂರು-ಹುಬ್ಬಳ್ಳಿ	"	ನವಲಗುಂದ	ಧಾರವಾಡ	13.05
26	18/19	ಧರ್ಮಸ್ಥಳ-ಯಲ್ಲಾಪುರ	"	ಯಲ್ಲಾಪುರ	ಐ.ಕ.	13.30
27	15/16	ಮಂಗಳೂರು-ಹುಬ್ಬಳ್ಳಿ	"	ಯಲ್ಲಾಪುರ	ಐ.ಕ.	13.45
28	48/48	ಭಟ್ಕಳ-ಹುಬ್ಬಳ್ಳಿ	"	ಭಟ್ಕಳ	ಐ.ಕ.	13.45
29	16/17	ಮಂಗಳೂರು-ಹುಬ್ಬಳ್ಳಿ	"	ಯಲ್ಲಾಪುರ	ಐ.ಕ.	14.15
30	41/42	ಭಟ್ಕಳ-ಸೊಲ್ಲಾಪುರ	"	ಭಟ್ಕಳ	ಐ.ಕ.	14.45
31	42/43	ಧರ್ಮಸ್ಥಳ-ಮಣಿ	"	ಧರ್ಮಸ್ಥಳ	ಮಂಗಳೂರು	14.45
32	74/75	ಭಟ್ಕಳ-ಗುಲ್ಬರ್ಗಾ	"	ಭಟ್ಕಳ	ಐ.ಕ.	14.45
33	154/155	ಧರ್ಮಸ್ಥಳ-ಹುಬ್ಬಳ್ಳಿ	"	ಧರ್ಮಸ್ಥಳ	ಮಂಗಳೂರು	15.15
34	15/16	ಭಟ್ಕಳ-ಶಿರಸಿ	"	ಭಟ್ಕಳ	ಐ.ಕ.	15.30
35	19/20	ಉಡುಪಿ-ಗುಲ್ಬರ್ಗಾ	"	ಉಡುಪಿ	ಮಂಗಳೂರು	15.45
36	11/12	ಮಂಗಳೂರು-ಬೆಳಗಾಂ	"	ಉಡುಪಿ	ಮಂಗಳೂರು	16.05
37	50	ಮಣಿಪಾಲ-ಶಿರಸಿ	"	ಶಿರಸಿ	ಐ.ಕ.	16.30
38	29/29	ಭಟ್ಕಳ-ಹುಬ್ಬಳ್ಳಿ	"	ಭಟ್ಕಳ	ಐ.ಕ.	17.00

39	43/44	ಭಟ್ಕಳ-ಕುಮಟಾ		ಭಟ್ಕಳ	ಉ.ಕ.	17.30
40	35/36	ಕುಂದಾಪುರ-ಕುಮಟಾ	"	ಕುಂದಾಪುರ	ಮಂಗಳೂರು	17.45
41	148/149	ಮಂಗಳೂರು-ಬಾಗಲಕೋಟ	"	ಉಡುಪಿ	ಮಂಗಳೂರು	17.50
42	42/43.	ಮಂಗಳೂರು-ಗುಲ್ಬರ್ಗಾ	ವೇಗದೂತ	ಗುಲ್ಬರ್ಗಾ	ಗುಲ್ಬರ್ಗಾ	18.00
43	83/84	ಮಂಗಳೂರು-ಸಿಂದಗಿ	"	ಸಿಂದಗಿ	ಬಿಜಾಪುರ	18.50
44	51/52	ಧರ್ಮಸ್ಥಳ-ಅಥಣಿ	"	ಅಥಣಿ	ಚಿಕ್ಕೋಡಿ	19.20
45	48/49	ಮಂಗಳೂರು-ತಾಳಿಕೋಟೆ	"	ತಾಳಿಕೋಟೆ	ಬಿಜಾಪುರ	19.30
46	55/56	ಮಂಗಳೂರು-ರಟ್ಟೆಹಳ್ಳಿಗಡ	"	ರಟ್ಟೆಹಳ್ಳಿ	ರಡ್ಡಿಗ	20.15
47	57/58	ಧರ್ಮಸ್ಥಳ-ಬಾದಾಮಿ	"	ಬಾದಾಮಿ	ಬಾಗಲಕೋಟ	21.00
48	9/10	ಸುಬ್ರಹ್ಮಣ್ಯ-ಹುಬ್ಬಳ್ಳಿ	"	ಯಲ್ಲಾಪುರ	ಉ.ಕ.	21.00
49	135/136	ಮಂಗಳೂರು-ಮುಧೋಳ	"	ಮುಧೋಳ	ಬಿಜಾಪುರ	21.15
50	3/4	ಮಂಗಳೂರು-ಗುಳೇದಗುಡ್ಡ	"	ಗುಳೇದಗುಡ್ಡ	ಬಾಗಲಕೋಟ	21.15
51	98/99	ಮಂಗಳೂರು-ಕುಷ್ಟಗಿ	"	ಕುಷ್ಟಗಿ	ಕೊಪ್ಪಳ	21.30
52	141/142	ಮಂಗಳೂರು-ಬಾಗಲಕೋಟ	"	ಬಾಗಲಕೋಟ	ಬಾಗಲಕೋಟ	22.00
53	34/35	ಮಂಗಳೂರು-ರಟ್ಟೆಹಳ್ಳಿಗಡ	"	ರಟ್ಟೆಹಳ್ಳಿಗಡ	ರಡ್ಡಿಗ	22.15
54	37/38	ಮಂಗಳೂರು-ಇಳಕಲ್	"	ಇಳಕಲ್	ಬಾಗಲಕೋಟ	2220
55	24/25	ಧರ್ಮಸ್ಥಳ-ಹುಬ್ಬಳ್ಳಿ	"	ಹುಬ್ಬಳ್ಳಿ	ಹುಬ್ಬಳ್ಳಿ	22.20

56	108/109	ಮಂಗಳೂರು-ಕೊಣಾಜೆಸಂಗಮ	"	ಇಕಕಲ್	ಬಾಗಲಕೋಟ	22.30
57	168/169	ಮಂಗಳೂರು-ಗುಡೂರು	"	ಮಂಗಳೂರು	ಮಂಗಳೂರು	22.45
58	156/157	ಧರ್ಮಸ್ಥಳ-ಶೆಕಗಾಂವ	"	ಧರ್ಮಸ್ಥಳ	ಮತ್ತೂರು	23.00
59	19/20	ಮಂಗಳೂರು-ಬಾಗಲಕೋಟ	"	ಮಂಗಳೂರು	ಮಂಗಳೂರು	23.30
60	92/93	ಮಂಗಳೂರು-ರಬಕವಿ	"	ಮಂಗಳೂರು	ಮಂಗಳೂರು	23.30
61	23/24	ಮಂಗಳೂರು-ಕಮಟಗಿ	"	ಮಂಗಳೂರು	ಮಂಗಳೂರು	23.35
62	60/61	ಧರ್ಮಸ್ಥಳ-ರಾಯಚೂರ	"	ರಾಯಚೂರ	ಚಿಕ್ಕೋಡಿ	23.45
63	19/20	ಮಂಗಳೂರು-ಗಜೇಂದ್ರಗಡ	"	ಗಜೇಂದ್ರಗಡ	ಗದಗ	00.00
64	32/33	ಮಂಗಳೂರು-ಲಕ್ಷ್ಮೇಶ್ವರ	"	ಹಾವೇರಿ	ಹಾವೇರಿ	0.05
65	148/149	ಮಂಗಳೂರು-ಬಾಗಲಕೋಟ	"	ಬಾಗಲಕೋಟ	ಬಾಗಲಕೋಟ	0.05
66	48/49	ಮಂಗಳೂರು-ಜಕನಿ	"	ಜಕನಿ	ಬಾಗಲಕೋಟ	0.15
67	129/130	ಮಂಗಳೂರು-ಗಜೇಂದ್ರಗಡ	"	ಗಜೇಂದ್ರಗಡ	ಗದಗ	0.15
68	38/39	ಮಂಗಳೂರು-ಗಂಗಾವತಿ	"	ಕೊಪ್ಪಳ	ಕೊಪ್ಪಳ	0.30
69	108/109	ಮಂಗಳೂರು-ಹುಬ್ಬಳ್ಳಿ	"	ಧರ್ಮಸ್ಥಳ	ಮತ್ತೂರು	1.00
70	31/32	ಮಂಗಳೂರು-ಗಜೇಂದ್ರಗಡ	"	ಮಂಗಳೂರು	ಮಂಗಳೂರು	1.35
71	31	ಭಟ್ಕಳ-ಶಿಂಗಳೂರು	"	ಭಟ್ಕಳ	ಉ.ಕ	7.45
72	7/8	ಭಟ್ಕಳ-ಶಿಂಗಳೂರು	"	ಭಟ್ಕಳ	ಉ.ಕ	16.15

ಅಂಕೋಲಾ-ಕಾರವಾರ ಕಡೆಗೆ

73	11	ಭಟ್ಕಳ-ಮುರುಡೇಶ್ವರ	"	ಭಟ್ಕಳ	ಅ.ಕ	6.20
74	20/21	ಭಟ್ಕಳ-ಹೊನ್ನಾವರ	"	ಭಟ್ಕಳ	ಅ.ಕ	7.30
75	53/54	ಕುಂದಾಪುರ-ಹೊನ್ನಾವರ	"	ಕುಂದಾಪುರ	ಮಂಗಳೂರು	8.00
76	43/44	ಭಟ್ಕಳ-ಕಾರವಾರ	"	ಭಟ್ಕಳ	ಅ.ಕ	8.30
77	43/44	ಭಟ್ಕಳ-ಕಾರವಾರ	"	ಭಟ್ಕಳ	ಅ.ಕ	9.00
78	15/16	ಉಡುಪಿ-ಬೆಳಗಾಂ	"	ಉಡುಪಿ	ಮಂಗಳೂರು	10.05
79	11/12	ಪುತ್ತೂರು-ಪಣಜಿ	"	ಪುತ್ತೂರು	ಮಂಗಳೂರು	11.45
80	59/60	ಧರ್ಮಸ್ಥಳ-ಹುಬ್ಬಳ್ಳಿ	"	ಧರ್ಮಸ್ಥಳ	ಮಂಗಳೂರು	12.05
81	1/2	ಧರ್ಮಸ್ಥಳ-ಬೈಲ್ಹೊಂಗಲ್	"	ಬೈಲಹೊಂಗಲ	ಬೆಳಗಾಂ	13.05
82	12/12	ಭಟ್ಕಳ-ಪಣಜಿ	"	ಭಟ್ಕಳ	ಅ.ಕ	13.30
83	7	ಭಟ್ಕಳ-ಹುಬ್ಬಳ್ಳಿ	"	ಹುಬ್ಬಳ್ಳಿ	ಹುಬ್ಬಳ್ಳಿ	14.00
84	15/16	ಸುಬ್ರಹ್ಮಣ್ಯ -ಗೋಕರ್ಣ	"	ಕುಮಟ	ಅ.ಕ	14.40
85	43/44	ಭಟ್ಕಳ-ಕಾರವಾರ	"	ಭಟ್ಕಳ	ಅ.ಕ	15.00
86	34/35	ಧರ್ಮಸ್ಥಳ-ಕಾರವಾರ	"	ಕಾರವಾರ	ಅ.ಕ	15.15
87	39	ಮಣಿಪಾಲಕಾರವಾರ	"	ಕಾರವಾರ	ಅ.ಕ	15.50
88	163/164	ಮೈಸೂರು-ಗೋಕರ್ಣ	"	ಮೈಸೂರ	ಮೈಸೂರ	16.45
89	40/41	ಧರ್ಮಸ್ಥಳ-ಹುಬ್ಬಳ್ಳಿ	"	ಧರ್ಮಸ್ಥಳ	ಮಂಗಳೂರು	16.45
90	120/121	ಮಂಗಳೂರು-ನಾಂಲ್ಗಿ	"	ಮಂಗಳೂರು	ಮಂಗಳೂರು	17.45
91	63/64	ಸುಬ್ರಹ್ಮಣ್ಯ-ಕಾರವಾರ	"	ಪುತ್ತೂರು	ಮಂಗಳೂರು	18.00
92	42/43	ಉಡುಪಿ-ಗುಲ್ಬರ್ಗಾ	"	ಗುಲ್ಬರ್ಗಾ	ಗುಲ್ಬರ್ಗಾ	18.00
93	167/168	ಸುಬ್ರಹ್ಮಣ್ಯ-ಗೋಕರ್ಣ	"	ಧರ್ಮಸ್ಥಳ	ಪುತ್ತೂರ	18.30
94	7/8	ಮಂಗಳೂರು-ರಾಯಚೂರು	"	ರಾಯಚೂರು	ರಾಯಚೂರು	18.30
95	76/77	ಮಂಗಳೂರು-ಪಿರ್ಣಿ	"	ಪಿರ್ಣಿ	ಜಮಖಂಡಿ	18.45
96	14/15	ಮಂಗಳೂರುಗುಲ್ಬರ್ಗಾ	"	ಹುಬ್ಬಳ್ಳಿ	ಹುಬ್ಬಳ್ಳಿ	20.15
97	49/50	ಮಂಗಳೂರು-ಗಜೇಂದ್ರಗಡ	"	ಗಜೇಂದ್ರಗಡ	ಜಮಖಂಡಿ	20.30

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಇದು ಸಾರ್ವಜನಿಕ ಹಿತದೃಷ್ಟಿಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ತಾವೇ ಆ ಪ್ರಶ್ನೆಯನ್ನು ಕೇಳಬಹುದು. ಪುಟ್ಟಣ್ಣಯ್ಯನವರು ಇಲ್ಲದಿರುವುದರಿಂದ as per Rules ತಾವೇ ಕೇಳಿ.

ಅಧ್ಯಕ್ಷರು : ಕೇಳಬಹುದು, ಆಮೇಲೆ ಕೇಳುತ್ತೇನೆ.

ಶ್ರೀ ಮಂಕಾಳ ಸುಬ್ಬವೈದ್ಯ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಮುರುಡೇಶ್ವರದಲ್ಲಿ ಬಸ್ ನಿಲ್ದಾಣವು ಮುಖ್ಯ ರಸ್ತೆಯಿಂದ 1.5 ಕಿ.ಮೀ ಒಳಭಾಗದಲ್ಲಿದೆ. ಎಲ್ಲಾ ವಿಭಾಗದ ಬಸ್ಸುಗಳು ಒಳಗಡೆ ಹೋಗಿ ಬರಬೇಕು. ವಯಸ್ಸಾಗಿರುವಂತಹ ಯಾತ್ರಿಕರು ಬರುತ್ತಾರೆ. ಮುರುಡೇಶ್ವರ ಇಡೀ ಜಗತ್ತಿಗೆ ಪ್ರಸಿದ್ದವಾಗಿದೆ ಎಂದು ಕೇಳಿದ್ದೇನೆ. ಆ ಡಿಪೋದಿಂದ ಬರುವ ಬಸ್ಸು ಮಾತ್ರ ಒಳಗಡೆ ಬಿಡುತ್ತಾರೆ, ಅದಲ್ಲದೆ ಬೇರೆ ಯಾವುದೇ ಬಸ್ಸು ಬಿಡುವುದಿಲ್ಲ. ಇಡೀ ರಾಜ್ಯದ ಎಲ್ಲಾ ವಿಭಾಗದ ಬಸ್ಸು ಮುರುಡೇಶ್ವರ ಬಸ್ ಸ್ಟ್ಯಾಂಡ್‌ಗೆ ಹೋಗಿಬರುವ ಹಾಗೆ ವ್ಯವಸ್ಥೆ ಮಾಡಿಕೊಡಬೇಕೆಂದು ನನ್ನ ಪ್ರಶ್ನೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಈಗ 3 ರಾಜಹಂಸ, 1 ಸ್ಲೀಪರ್, 1 ಮಲ್ಟಿಆಕ್ಸೆಲ್, 10 ವೇಗದೂತ ಮತ್ತು 20 ಸಾಮಾನ್ಯ ಸಾರಿಗೆ ಬಸ್ಸುಗಳು ಒಟ್ಟು 35 ಸಾರಿಗೆಗಳು ಒಂದೂವರೆ ಕಿಲೋಮೀಟರ್ ಒಳಗಡೆ ಹೋಗಿ ಬರುತ್ತದೆ. ಅಲ್ಲಿ ನಾಲ್ಕೈದು ಬಸ್ಸುಗಳು ನಿಲ್ಲುವುದಕ್ಕೆ ಕೂಡ ಜಾಗ ಇಲ್ಲ. ಎಲ್ಲಾ ಬಸ್ಸುಗಳು ಹೋದರೆ ತುಂಬಾ ಇಕ್ಕಟ್ಟಾಗುತ್ತದೆ.

ಅಧ್ಯಕ್ಷರು : ಅದು ತುಂಬಾ ದೊಡ್ಡ ಯಾತ್ರಾ ಸ್ಥಳವಾಗಿದೆ. ನೀವು ಒಂದು ಕೆಲಸ ಮಾಡಿ. ಅಲ್ಲಿ ನೀವು ಹೋಗಿ ರಸ್ತೆ ವಗೈರೆ ಸ್ವಲ್ಪ widen ಮಾಡಿ ವ್ಯವಸ್ಥೆ ಮಾಡಿ ಕೊಟ್ಟರೆ ಒಳ್ಳೆಯದು. ಆ ರೀತಿ ಮಾಡಿ.

ಶ್ರೀ ರಾಮಲಿಂಗಾರೆಡ್ಡಿ : ಅಲ್ಲಿ ನಾಲ್ಕೈದು ಬಸ್ಸುಗಳು ನಿಂತುಕೊಳ್ಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಅಲ್ಲಿ ನಾನು ನೋಡಿದ್ದೇನೆ, ಬಹಳ congested ಇದೆ. ಮಾನ್ಯ ಸದಸ್ಯರು ಹೇಳಿದಂತೆ ಸ್ಥಳೀಯವಾಗಿ ತಹಸೀಲ್ದಾರ್ ನೀವು ಸೇರಿಕೊಂಡು ರಸ್ತೆಯನ್ನು ಸ್ವಲ್ಪ widen ಮಾಡಿಸಿ.

ಶ್ರೀ ಮಂಕಾಳ ಸುಬ್ಬವೈದ್ಯ : ಇವರು ಕೆಲವೊಂದು ಬಸ್ಸು ಕೊಟ್ಟಿದ್ದಾರೆ, ಅವು ಹೈವೇಯಲ್ಲಿ ಕೂಡ ನಿಲ್ಲಿಸುವುದಿಲ್ಲ. ಎಲ್ಲಾ ವಿಭಾಗದ ಬಸ್ಸು ಹೈವೇಯಲ್ಲಿ ನಿಲ್ಲುವ ಹಾಗೆ ಮಾಡಬೇಕು.

ಅಧ್ಯಕ್ಷರು : ಹೈವೇಯಲ್ಲಿ ಕೂಡ ನಿಲ್ಲಿಸುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ರಾಮಲಿಂಗಾರೆಡ್ಡಿ : ಅದು ಬೇಕಾದರೆ ಮಾಡಬಹುದು.

ಅಧ್ಯಕ್ಷರು : ಮಾನ್ಯ ಪುಟ್ಟಣ್ಣಯ್ಯನವರು ಕೇಳಿರುವ ಪ್ರಶ್ನೆ ಬಹಳ ಒಳ್ಳೆಯ ಪ್ರಶ್ನೆ ಇದೆ. ಮಾನ್ಯ ಸದಸ್ಯರಾದ ಎಸ್.ಆರ್.ಮಹೇಶ್‌ರವರ 2147 ಪ್ರಶ್ನೆಯನ್ನು ನಾನೇ ಕೇಳುತ್ತೇನೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಜೂರಾದ ವೈದ್ಯರುಗಳ ಸಂಖ್ಯೆ

116 (2147); ಶ್ರೀ ಮಹೇಶ್ ಎಸ್,ಆರ್. (ಕೃಷ್ಣರಾಜನಗರ)

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಂಜೂರಾಗಿರುವ ವೈದ್ಯರುಗಳ ಸಂಖ್ಯೆ ಎಷ್ಟು;

ಆ) ಸರ್ಕಾರ ಮಂಜೂರು ಮಾಡಿರುವ ಎಲ್ಲಾ ಹುದ್ದೆಗಳಲ್ಲಿ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆಯೇ:

ಇ) ರಾಜ್ಯದ ಬಹುತೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು ಸರ್ಕಾರಕ್ಕಿರುವ ತೊಂದರೆಗಳೆನು?